**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 27.11.2025**

**ಪಾಟೀ ಸವಾಲುಃ 1 ನೇ ವಾದಿ ಪರ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಈಗ 68 ವರ್ಷ. ವಾದಿಗಳು ನನಗೆ ಅಕ್ಕ, ತಂಗಿ, ತಮ್ಮ ಆಗಬೇಕು. ಪುಟ್ಟಶೆಟ್ಟಿರವರಿಗೆ ಇಬ್ಬರು ಗಂಡು ಮಕ್ಕಳು. ಅಣ್ಣಯ್ಯ ಶೆಟ್ಟಿ ಹಾಗೂ ತಿಮ್ಮಶೆಟ್ಟಿ, ಅಣ್ಣಯ್ಯ ಶೆಟ್ಟಿ ನಿಮ್ಮ ಮತ್ತು ವಾದಿಗಳ ತಂದೆ ಎಂದರೆ ಸರಿ. ತಿಮ್ಮಶೆಟ್ಟಿರವರಿಗೆ ಮಕ್ಕಳು ಇರಲಿಲ್ಲ. ತಿಮ್ಮಶೆಟ್ಟಿರವರು ಯಾವುದೇ ಮಕ್ಕಳನ್ನು ದತ್ತು ತೆಗೆದುಕೊಂಡಿರಲಿಲ್ಲ. ಸಾಕ್ಷಿ ಸ್ವತಃ ನನ್ನ ಚಿಕ್ಕಮ್ಮ ಅವರ ತಂಗಿ ಮಗಳನ್ನು ಸೌಕರ್ಣೆಗಾಗಿ ತಂದು ಇಟ್ಟುಕೊಂಡಿದ್ದರು ಎಂದು ಹೇಳುತ್ತಾರೆ. ವಾದಿಗಳು ಈ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆಂದು ನನಗೆ ಖಚಿತವಾಗಿ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರ ಹಾಗೂ ನನ್ನ ಸಾಕ್ಷ್ಯ ಪ್ರಮಾಣಪತ್ರದ ಸಂಗತಿಗಳು ನನಗೆ ಚೆನ್ನಾಗಿ ಗೊತ್ತಿದೆ.

2. ದಾವಾ ಷೆಡ್ಯೂಲ್ ಸ್ವತ್ತುಗಳು ಎಲ್ಲವು ನಿಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.ನಮ್ಮ ತಾತ ಪುಟ್ಟಶೆಟ್ಟಿರವರನ್ನು ನಾನು ನೋಡಿಲ್ಲ. ನಮ್ಮ ತಾತ ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪ ರವರುಗಳು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರಲಿಲ್ಲ. ನಿಮ್ಮ ತಾತ ಮರಣ ಹೊಂದಿದ ನಂತರ ನಿಮ್ಮ ತಂದೆ ಮತ್ತು ಚಿಕ್ಕಪ್ಪ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ ಯಾವಾಗ ತೀರಿಹೋದರು ಎಂದರೆ ಸಾಕ್ಷಿ ನನಗೆ 10 ವರ್ಷ ಇದ್ದಾಗ ಮೃತರಾದರು

ಎಂದು ಹೇಳುತ್ತಾರೆ. ನಿಮ್ಮ ತಂದೆ ದಿಃ 10.06.1976 ರಂದು ತೀರಿಹೋಗಿದ್ದಾರೆ ಎಂದರೆ ಸರಿ. ನಿಮ್ಮ ತಂದೆಯ ಮರಣಾನಂತರ ನಿಮ್ಮ ಕುಟುಂಬದ ವ್ಯವಹಾರಗಳನ್ನು ನಿಮ್ಮ ಚಿಕ್ಕಪ್ಪ ತಿಮ್ಮಶೆಟ್ಟಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಮಂ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ಚಿಕ್ಕಪ್ಪ ತಿಮ್ಮಶೆಟ್ಟಿ ಮೃತರಾದ ಸುಮಾರು 15 ವರ್ಷವಾಗಿದೆ. ನಿಮ್ಮ ಚಿಕ್ಕಪ್ಪ 04.07.1994 ರಂದು ತೀರಿ ಹೋಗಿದ್ದಾರೆಂದರೆ ಸರಿ.

3. ನೀವು ಮತ್ತು ವಾದಿಗಳು, 2 ನೇ ಪ್ರತಿವಾದಿ ದಾವಾಸ್ತಿಗಳನ್ನು ಇಲ್ಲಿಯವರೆಗೂ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಸಾಕಮ್ಮರವರ ತಂಗಿ ಮಗಳು ಎಂದರೆ ಸರಿ. 2 ನೇ ಪ್ರತಿವಾದಿಯ ಊರು ಜೆ ಮಲ್ಲನಹಳ್ಳಿ ಗ್ರಾಮ. ನಿಮ್ಮ ಕುಟುಂಬಕ್ಕೆ ದಾವಾಸ್ತಿಗಳಿಂದ ಬರುವ ಆಸ್ತಿ ಬಿಟ್ಟರೆ ಬೇರೆ ಆದಾಯ ಇಲ್ಲ ಎಂದರೆ ಸರಿ ಸಾಕ್ಷಿ ಆ ಆಸ್ತಿಗಳಿಂದ ಆದಾಯ ಇಲ್ಲವೆಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ 2 ನ್ನು ಒಟ್ಟು ಕುಟುಂಬದ ಆದಾಯದಿಂದ ನಿಮ್ಮ ಹೆಸರಿನಲ್ಲಿ ಖರೀದಿಸಿದೆ ಎಂದರೆ ಸರಿಯಲ್ಲ. ದಾವಾ ಐಟಂ 2 ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಸಾಕ್ಷಿ ಮಾಡಿಸುತ್ತೇನೆಂದು ಹೇಳುತ್ತಾರೆ. ದಾವಾ ಐಟಂ 1, 3 ಮತ್ತು 4 ಸ್ವತ್ತುಗಳಿಗೆ ಸಂಬಧಿಸಿದಂತೆ ನಿಮ್ಮ ಚಿಕ್ಕಪ್ಪ ತಿಮ್ಮಶೆಟ್ಟಿ ಬದುಕಿದ್ದಾಗ ಏನಾದರೂ ದಾಖಲೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಐಟಂ 1, 3 ಮತ್ತು 4 ನಿಮ್ಮ ಚಿಕ್ಕಪ್ಪನಿಗೆ ನಿಮ್ಮ ತಾತನಿಂದ ಬಂದ ಆಸ್ತಿಗಳು ಎಂದರೆ ಸರಿ. ದಾವಾಸ್ತಿಗಳಲ್ಲಿ

*ವಾದಿಗಳಿಗೆ ಮತ್ತು ನಿಮಗೆ 1/5 ಭಾಗ ಹಕ್ಕಿದೆ ಎಂದರೆ ಸಾಕ್ಷಿ ಸ್ವತಃ ನನಗೆ ಭಾಗ ಬೇಡ ಎಂದು ಹೇಳುತ್ತಾರೆ ಹಾಗೂ ನ್ನನ ಮಗ ಉಂಟು ಅವರು ಉಂಟು ಎಂದು ಹೇಳುತ್ತಾರೆ.*

*4. ದಾವಾ ಐಟಂ 2 ಮೊದಲು ನಿಮ್ಮ ಚಿಕ್ಕಪ್ಪ ತಿಮ್ಮಶೆಟ್ಟಿ ಹೆಸರಿನಲ್ಲಿತ್ತು ಎಂದರೆ ಸರಿ. ದಾವಾ ಐಟಂ 2 ನಿಮ್ಮ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆಂದು ಒಟ್ಟು ಕುಟುಂಬದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋದೂರಿನಲ್ಲಿ ನೀವು ಯಾವತ್ತು ವಾಸ ಇಲ್ಲ ಎಂದರೆ ಸರಿಯಲ್ಲ. ನಿಡಿ.2 ರಿಂದ 5 ಈ ದಾವೆಗೋಸ್ಕರ ಸೃಷ್ಟಿಸಿದೆ ಎಂದರೆ ಸರಿಯಲ್ಲ.*

***ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಅವರು 1 ನೇ ಪ್ರತಿವಾದಿಯನ್ನು ಪಾಟೀ ಸವಾಲು ಮಾಡಲು ಕೋರಿರುವುದರಿಂದ ಅವರನ್ನು 2 ನೇ ಪ್ರತಿವಾದಿ ಸವಾಲು ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಆದ್ದರಿಂದ ಅವರ ಮನವಿಯನ್ನು ತಿರಸ್ಕರಿಸಲಾಯಿತು.***

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***